# ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ದೂರವಾಣಿ : 2404922
E-mail : aeehtgmys@gmail.com

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ.) ರವರ ಕಛೇರಿ
ಚಾ.ವಿ.ಸ.ನಿ.ನಿ., ಹೂಟಗಳ್ಳಿ ಉಪ-ವಿಭಾಗ, ಹೂಟಗಳ್ಳಿ,
ಮೈಸೂರು.

ಕ್ರ.ಸಂ: ಸ.ಕಾ.ನಿ.ಇಂ(ವಿ)/ಸ.ಇಂ(ತಾ)/ಹೂ. 936-938.    ದಿನಾಂಕ : 18.07.2018
20

## ಸಭಾ ನಡಾವಳಿ

**ಹೂಟಗಳ್ಳಿ ಉಪವಿಭಾಗದಲ್ಲಿ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ದಿನಾಂಕ : 07.07.2018 ರಂದು ಬೆಳಗ್ಗೆ 11:00 ಗಂಟೆಗೆ ಜನ ಸಂಪರ್ಕ ಸಭೆಯನ್ನು ಗ್ರಾಹಕರ ವಿದ್ಯುತ್ ಸಂಬಂಧಿತ ದೂರುಗಳು/ಕುಂದುಕೊರತೆಗಳ ಕುರಿತು ನಡೆದ ಸಭಾ ನಡಾವಳಿ.**

**ಸಭೆಗೆ ಹಾಜರಿದ್ದ ಅಧಿಕಾರಿ/ನೌಕರರು :-**

1. ಶ್ರೀ ಮುನಿಗೋಪಾಲ್ ರಾಜುರವರು, ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ವೃತ್ತ ಕಛೇರಿ, ಮೈಸೂರು
2. ಶ್ರೀಯುತ ಸೋಮರಾಜು, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಮೈಸೂರು ವೃತ್ತ, ಚಾ.ವಿ.ಸ.ನಿ.ನಿ, ಮೈಸೂರು.
3. ಶ್ರೀ. ಉಮೇಶ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ., ಹೂಟಗಳ್ಳಿ ಉಪವಿಭಾಗ, ಮೈಸೂರು
4. ಶ್ರೀಮತಿ ಮಂಜುಳಾ, ಸಹಾಯಕ ಇಂಜಿನಿಯರ್(ತಾ), ಚಾ.ವಿ.ಸ.ನಿ.ನಿ, ಹೂಟಗಳ್ಳಿ ಉಪವಿಭಾಗ, ಮೈಸೂರು
5. ಶ್ರೀ ಮಂಜುನಾಥ, ಸಹಾಯಕ ಇಂಜಿನಿಯರ್(ವಿ), ಹೂಟಗಳ್ಳಿ ಶಾಖೆ,
6. ಶ್ರೀ ಸಂದೀಪ್, ಸಹಾಯಕ ಇಂಜಿನಿಯರ್(ವಿ), ಬೋಗಾದಿ ಶಾಖೆ.
7. ಶ್ರೀ ರಾಘವೇಂದ್ರ, ಕಿರಿಯ ಇಂಜಿನಿಯರ್(ವಿ), ಇಲವಾಲ ಶಾಖೆ.

**ಸಭೆಗೆ ಹಾಜರಿದ್ದ ಗ್ರಾಹಕರು :**

1. ಶ್ರೀ ಚಂದ್ರು, ಮೈಸೂರು,
2. ಶ್ರೀ ಮಹದೇವೇಗೌಡ, ಮೈಸೂರು.
3. ಶ್ರೀ ವೇದರಾಜು

2612
25 .07. 2018
ಮೈಸೂರು

78

*********

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು. ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ವಿದ್ಯುತ್ ಗ್ರಾಹಕರ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದ್ವಯ ಪ್ರತಿ 2 ತಿಂಗಳಿಗೊಮ್ಮೆ ಉಪವಿಭಾಗ ಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆಯನ್ನು ನಡೆಸಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು.

ದಿನಾಂಕ : 17.05.2018 ರಂದು ನಡೆದ ಸಭೆಯಲ್ಲಿ ಸ್ವೀಕರಿಸಿದ ದೂರುಗಳು 2, ಈ ದೂರುಗಳು ಬಗ್ಗೆಹರೆದಿರುತ್ತದೆ.

ದಿನಾಂಕ : 07.07.2018 ರಂದು ಸ್ವೀಕೃತವಾದ ದೂರಿನ ಸಂಖ್ಯೆ : 3

...2...

ಚಾ.ವಿ.ಸ.ನಿ.ನಿ.
ಶಾಖೆ
ಲೆಕ್ಕ
ಓ.ಆ.ಸ.
ಮು.ಗು.

AEE(E)

ದಿನಾಂಕ : 17.05.2018 ರಂದು ಹೂಟಗಳ್ಳಿ ಉಪವಿಭಾಗದಲ್ಲಿ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ಸಭೆಯ ಗ್ರಾಹಕರ ವಿದ್ಯುತ್ ಸಂಬಂಧಿತ ದೂರುಗಳು/ಕುಂದುಕೊರತೆಗಳ ಬಗ್ಗೆ ಕುಲಂಕುಷವಾಗಿ ಪರಿಶೀಲಿಸಿ ತೆಗೆದುಕೊಂಡ ಕ್ರಮದ ಬಗ್ಗೆ ಕೆಳಕಂಡಂತೆ ವಿವರಿಸಿದರು.

| ಕ್ರ. ಸ ೦. | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ತೆಗೆದುಕೊಂಡ ಕ್ರಮಗಳು |
|---|---|---|---|
| 1 | ಅಶ್ವಥ್ ನಾರಾಯಣ | ▪ ವೇಳಾಪಟ್ಟಿಯ ಪ್ರಕಾರ ದಿನಾಂಕ : 19.05.2018 ರಂದು ನಡೆಸಬೇಕಾದ ಸಭೆಯನ್ನು ಎರಡು ದಿನ ಮುಂಚಿತವಾಗಿ ದಿನಾಂಕ : 17.05.2018 ರಂದೇ ನಡೆಸುತ್ತಿರುವುದರ ಬಗ್ಗೆ ಆಕ್ಷೇಪ ವ್ಯಕ್ತ ಪಡಿಸಿರುತ್ತಾರೆ.<br>▪ ನೂತನವಾಗಿ ನೊಂದಾಯಿಸುವ ಅರ್ಜಿಯನ್ನು 30 ದಿನಗಳ ಕಾಲಾವಕಾಶವೆಂದು ಮಂಜೂರಾತಿ ಪತ್ರದಲ್ಲಿ ತಿಳಿಸಿರುತ್ತೀರಿ. ಆದರೆ ಕೆ.ಇ.ಆರ್.ಸಿ ನಿಯಮಾನುಸಾರ 90 ದಿನಗಳು ಇರುತ್ತದೆ ಎಂದು ದೂರು ನೀಡಿರುತ್ತಾರೆ. | ▪ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಉತ್ತರಿಸುತ್ತ, ವೇಳಾಪಟ್ಟಿಯ ಪ್ರಕಾರ ಸಭೆಯನ್ನು ದಿನಾಂಕ : 19.05.2018 ರಂದು ನಡೆಸಬೇಕಾಗಿದ್ದು ಕಾರಣಾಂತರದಿಂದ ದಿನಾಂಕ : 17.05.2018 ರಂದು ನಡೆಸುವುದಕ್ಕಾಗಿ ಪತ್ರಿಕಾ ಪ್ರಕಟಣೆ ನೀಡಿ, ಪಂಚಾಯಿತಿಗಳಲ್ಲಿ ಹಾಗೂ ಶಾಖಾ ವ್ಯಾಪ್ತಿಯಲ್ಲಿ ಇದರ ಮಾಹಿತಿಗಳನ್ನು ಪ್ರಕಟಿಸಿ, ಸಭೆಯ ಮಾಹಿತಿಯನ್ನು ಪ್ರಚಾರ ಮಾಡಲಾಗಿರುತ್ತದೆ. ಹಾಗೂ ಇನ್ನೂ ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಲಾಗುವುದು ಎಂದು ತಿಳಿಸಿದರು.<br>▪ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಉತ್ತರಿಸುತ್ತ, ನಿಗಮವು ಕೆ.ಇ.ಆರ್.ಸಿ ನಿಯಮದ ಪ್ರಕಾರ 90 ದಿನಗಳನ್ನು ನೂತನ ಅರ್ಜಿಗಳಿಗೆ ಕಾಲಾವಕಾಶ ನೀಡಿರುತ್ತದೆ. ಹಾಗೂ ಮಂಜೂರಾತಿ ಪತ್ರದಲ್ಲಿಯೂ 30 ದಿನಗಳ ಕಾಲಾವಕಾಶದೊಂದಿಗೆ ಪ್ರಕಟಣೆಯಾಗುತ್ತಿರುವುದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು. |

ನಂತರ, ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ದಿನಾಂಕ : 07.07.2018 ರ ಸಭೆಯಲ್ಲಿ ಉಪವಿಭಾಗ ವ್ಯಾಪ್ತಿಯ ಗ್ರಾಹಕರುಗಳು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದುಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿ, ಸಭೆಯನ್ನು ಆರಂಭಿಸಿದರು.

**ಸಭೆಯಲ್ಲಿ ತಿಳಿಸಿದಂತಹ ಅಹವಾಲುಗಳು ಈ ಕೆಳಕಂಡಂತಿರುತ್ತವೆ :**

| ಕ್ರ.ಸಂ. | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1. | ಶ್ರೀ ವೇದರಾಜು | ▪ ಎಲ್.ಟಿ–5(ಬಿ) ಜಕಾತಿಯಲ್ಲಿ ಆರ್.ಆರ್.ಸಂಖ್ಯೆ:HBP1256 ಸ್ಥಾವರಕ್ಕೆ ಕಾರ್ಖಾನೆ ನಡೆಸಲು ಹೆಚ್ಚುವರಿಯಾಗಿ ಮಂಜೂರಾತಿ ಹೊಂದಿದ್ದು, ವಿದ್ಯುತ್ ಅಡಚಣೆ ಉಂಟಾಗದಂತೆ ನೋಡಿ ಕೊಳ್ಳಲು ಕೋರಿದರು. ಹಾಗೂ ಹೆಚ್ಚುವರಿ ಭಾರ ಮಂಜೂರಾದ ನಂತರ ಆವರಣದಲ್ಲಿ ಏನು ಕ್ರಮ ಕೈಗೊಳ್ಳಬೇಕು? ಕೇಳಿದರು. | ▪ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಉತ್ತರಿಸುತ್ತ, ತಾವು ಹೆಚ್ಚುವರಿ ಸಂಪರ್ಕ ಹೊಂದಿದ್ದಲ್ಲಿ ಮಂಜೂರಾತಿ ಪಡೆದ ನಂತರ ಭಾರದ ಅನುಸಾರವಾಗಿ ಸಿ.ಟಿ ಅಳವಡಿಸಿಕೊಂಡು ನಿಗಮದ ನಿಯಮಾನುಸಾರ ಕ್ರಮಬದ್ಧವಾಗಿ ಮಾಪಕವನ್ನು ಬದಲಾಯಿಸಿ ಕೊಳ್ಳಬೇಕು ಎಂದು ತಿಳಿಸಿದರು. ಎಲ್ಲಾ ಶಾಖಾಧಿಕಾರಿಗಳು ಯಾವುದೇ ಫೀಡರ್‌ಗೆ ಅಡಚಣೆ ಉಂಟಾಗದಂತೆ ಸೂಕ್ತ ಕ್ರಮದೊಂದಿಗೆ ಫೀಡರ್‌ನ ನಿರ್ವಾಹಣೆ ಕಾರ್ಯಗಳನ್ನು ಮಾಡಿಕೊಳ್ಳಲು ಸೂಚಿಸಿದರು. |
| 2. | ಶ್ರೀ ಚಂದ್ರು<br>ಶ್ರೀ ಮಾದೇಗೌಡ | ▪ ತಮ್ಮ ಬಿಲ್ಲಿನ ಹಣದ ಮೊತ್ತವನ್ನು ಕಂತಿನ ಮುಖಾಂತರ ಪಾವತಿಸಲು ಅವಕಾಶವಿದೆಯೇ ಎಂದು ಕೇಳಿದರು. | ▪ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಉತ್ತರಿಸುತ್ತ, ಬಿಲ್ಲಿನ ಮೊತ್ತವನ್ನು ಯಾವುದೇ ಕಂತುಗಳಲ್ಲಿ ಪಾವತಿಸಲು ಅವಕಾಶವಿರುವುದಿಲ್ಲ. ಸಂಪೂರ್ಣ ಹಣವನ್ನು ಗ್ರಾಹಕರು ಪಾವತಿಸಬೇಕಾಗಿರುತ್ತದೆ ಎಂದು ಸೂಚಿಸಿದರು. |

ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡಿ, ಗ್ರಾಹಕರು ಈ ಸಭೆಯಲ್ಲಿ ದಾಖಲಿಸಿದ ದೂರುಗಳನ್ನು ಆಧ್ಯತೆ ಮೇರೆಗೆ ಬಗೆಹರಿಸುವುದಾಗಿ ತಿಳಿಸಿ, ಭಾಗವಹಿಸಿದ ಎಲ್ಲಾ ಗ್ರಾಹಕರಿಗೆ ವಂದನೆಗಳನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಸೆಸ್ಕ್, ಹೂಟಗಳ್ಳಿ ಉಪವಿಭಾಗ,
ಮೈಸೂರು.

ಪ್ರತಿಯನ್ನು :

1. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾ ಮತ್ತು ಪಾ ವಿಭಾಗ, ಜೋಡಿ ಬಸವೇಶ್ವರ ರಸ್ತೆ, ಕುವೆಂಪುನಗರ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವಿಭಾಗ, ವಿ.ವಿ.ಮೊಹಲ್ಲಾ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ಕಛೇರಿ ಪ್ರತಿ.